# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 30 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 27-01-2026 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ULBs) ಪ್ರತಿದಿನ ಉತ್ಪತ್ತಿಯಾಗುತ್ತಿರುವ ಕಸದಲ್ಲಿ ಎಷ್ಟು ಪ್ರಮಾಣವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲಾಗುತ್ತಿದೆ; | • ರಾಜ್ಯದ 315 ನಗರ ಸ್ಥಳೀಯ ಸಂಸ್ಥೆಗಳಲ್ಲಿ (GBA ಹೊರತುಪಡಿಸಿ) ಪ್ರತಿದಿನ 7,389 ಟನ್‌ಗಳಷ್ಟು ಕಸ ಸಂಗ್ರಹಣೆಯಾಗುತ್ತಿದ್ದು, ಅದರಲ್ಲಿ ಪ್ರತಿದಿನ 6180 ಟನ್‌ಗಳಷ್ಟು ಕಸವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲಾಗುತ್ತಿದೆ.<br>• ಪ್ರತಿದಿನ ಸಂಗ್ರಹಗೊಳ್ಳುವ ಎಲ್ಲಾ ಕಸವನ್ನು ಪೂರ್ಣಪ್ರಮಾಣದಲ್ಲಿ ಸಂಸ್ಕರಣೆ ಮಾಡಲು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಅಗತ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತಿದೆ. |
| ಆ) | ಅನೇಕ ನಗರಗಳಲ್ಲಿ ಕಸದ ಗುಡ್ಡೆಗಳು (Legacy Waste) ಹೆಚ್ಚುತ್ತಿರುವುದನ್ನು ತಡೆಯಲು ಸರ್ಕಾರ ಸ್ವಚ್ಛ ಭಾರತ್ ಮಿಷನ್ 2.0 ಅಡಿಯಲ್ಲಿ ಕೈಗೊಂಡಿರುವ ಕ್ರಮಗಳೇನು? | • ರಾಜ್ಯದ ಒಟ್ಟು 222 ನಗರ ಸ್ಥಳೀಯ ಸಂಸ್ಥೆಗಳಲ್ಲಿ 78,26,574 ಟನ್‌ಗಳಷ್ಟು ಪಾರಂಪರಿಕ ತ್ಯಾಜ್ಯ ಶೇಖರಣೆಯಾಗಿರುವುದಾಗಿ ವರದಿಯಾಗಿರುತ್ತದೆ.<br>• ಸ್ವಚ್ಛ ಭಾರತ್ ಮಿಷನ್ (ನಗರ)-2.0ರ ಅಡಿಯಲ್ಲಿ ಸದರಿ ಪಾರಂಪರಿಕ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇಮಾಡಲು ನಗರ ಸ್ಥಳೀಯ ಸಂಸ್ಥೆಗಳು ಸಿದ್ಧಪಡಿಸಿರುವ ಒಟ್ಟು ರೂ.559.10 ಕೋಟಿಗಳ ಅಂದಾಜುಮೊತ್ತದ ವಿಸ್ತೃತ ಯೋಜನಾ ವರದಿಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ.<br>• ಅದರಂತೆ ನಗರ ಸ್ಥಳೀಯ ಸಂಸ್ಥೆಗಳು KTPP ನಿಯಮಗಳನ್ವಯ ಟೆಂಡರ್ ಕರೆದು ಪಾರಂಪರಿಕ ತ್ಯಾಜ್ಯವನ್ನು Remediation ಮಾಡುತ್ತಿವೆ. ಪ್ರಸ್ತುತ ಸುಮಾರು 24,76,000 ಟನ್ ಗಳಷ್ಟು ಪಾರಂಪರಿಕ ತ್ಯಾಜ್ಯವನ್ನು Remediation ಮಾಡಲಾಗಿದೆ. ಇದನ್ನು ತ್ವರಿತಗತಿಯಲ್ಲಿ ನಿರ್ವಹಿಸಲು ರಾಜ್ಯ ಮಟ್ಟದಲ್ಲಿ ನಿಯಮಿತವಾಗಿ ಪ್ರಗತಿ ಪರಿಶೀಲನೆಯನ್ನು ನಡೆಸಲಾಗುತ್ತಿದೆ.<br>• ಮುಂದುವರೆದು, ಕೇಂದ್ರ ಸರ್ಕಾರವು ರಾಜ್ಯದ 28 ಪ್ರಮುಖ ನಗರಗಳಲ್ಲಿ ಪಾರಂಪರಿಕ ತ್ಯಾಜ್ಯವನ್ನು ನಿಗಧಿತ ಕಾಲಾವಧಿಯೊಳಗೆ ವಿಲೇ ಮಾಡಲು DRAP (Dump Site Remediation Accelerator Program) ಯೋಜನೆ ಹಮ್ಮಿಕೊಂಡಿದ್ದು, ಆದ್ಯತೆಯ ಮೇರೆಗೆ ಪಾರಂಪರಿಕ ತ್ಯಾಜ್ಯವನ್ನು Remediation ಮಾಡಲು ಕ್ರಮ ವಹಿಸಲಾಗಿದೆ. |

(ಕಡತ ಸಂಖ್ಯೆ: ನಅಇ 19 ಸಿಎಸ್‌ಎಸ್ 2026)

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು